# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 548(562)
2. ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 11.12.2025
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ವ್ಯವಸ್ಥೆಯಲ್ಲಿನ ತೆರಿಗೆ ಹಂತಗಳನ್ನು ಕಡಿಮೆ ಮಾಡಿರುವುದರಿಂದ ರಾಜ್ಯಕ್ಕೆ ಆಗಿರುವ ನಷ್ಟದ ಪ್ರಮಾಣವೆಷ್ಟು; | 56ನೇ ಜಿ.ಎಸ್.ಟಿ. ಪರಿಷತ್ತಿನ ಅನುಮೋದನೆಯನುಸಾರ 2025 ಸೆಪ್ಟಂಬರ್ 22ನೇ ದಿನಾಂಕದಿಂದ ಜಾರಿಗೆ ಬರುವಂತೆ ಹೊಸ ತೆರಿಗೆ ದರದ ಹಂತಗಳನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಸ್ತುತ ಬೆಳವಣಿಗೆ ದರದ ಸ್ಥಿತಿಗತಿಯ ಪ್ರಕಾರ ಹಣಕಾಸು ವರ್ಷದ 2025-26ನೇ ಸಾಲಿಗೆ (ಸೆಪ್ಟಂಬರ್ 22 ರಿಂದ) ಸಂಭಾವ್ಯ ರಾಜಸ್ವ ಕೊರತೆಯ ಪ್ರಮಾಣ ರೂ.5000 ಕೋಟಿ ಎಂದು ಅಂದಾಜಿಸಲಾಗಿದೆ.<br>ಮುಂದುವರೆದು, ಸಂಪೂರ್ಣ ವರ್ಷಕ್ಕೆ ಈ ಸಂಭಾವ್ಯ ಕೊರತೆಯನ್ನು ಸಮಾನೀಕರಿಸಿದರೆ ರಾಜಸ್ವ ಕೊರತೆಯ ಪ್ರಮಾಣ ರೂ.9000 ಕೋಟಿ ಆಗುತ್ತದೆ. ಇದರ ಜೊತೆಗೆ ಪರಿಹಾರತ್ಮಕ ಉಪಕರವನ್ನು (Compensation Cess) ಜಿಎಸ್‌ಟಿಯೊಡನೆ ವಿಲೀನಗೊಳಿಸದೇ ಇರುವ ಪ್ರಯುಕ್ತ ಹೆಚ್ಚುವರಿಯಾಗಿ ವಾರ್ಷಿಕ ರೂ.9500 ಕೋಟಿಯಷ್ಟು ರಾಜಸ್ವದ ಕೊರತೆಯಾಗುತ್ತದೆ. |
| ಆ) | ಈ ನಷ್ಟವನ್ನು ತುಂಬಿಕೊಡುವಂತೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಹಕ್ಕೊತ್ತಾಯ ಮಂಡಿಸಿದೆಯೇ | 56ನೇ ಜಿಎಸ್‌ಟಿ ಪರಿಷತ್ತಿನ ಸಭೆಯಲ್ಲಿ ಕರ್ನಾಟಕದ ಪರವಾಗಿ ಸದರಿ ತೆರಿಗೆ ನಷ್ಟದ ಬಗೆ ಹಕ್ಕೊತ್ತಾಯವನ್ನು ಮಂಡಿಸಲಾಗಿದೆ. ಮುಂದುವರೆದು, ಈ ಸಂಬಂಧ ಕಾಲಕಾಲಕ್ಕೆ ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು ಬರೆಯಲಾಗಿರುತ್ತದೆ. |
| ಇ) | ಈ ವಿಚಾರದಲ್ಲಿ ಕೇಂದ್ರದ ನಿಲುವೇನು; ರಾಜ್ಯಗಳ ಅಭಿಪ್ರಾಯ ಪಡೆಯದೆ ಏಕಾಏಕೀ ನಿಲುವು ತೆಗೆದುಕೊಳ್ಳದಂತೆ ಕೇಂದ್ರಕ್ಕೆ ಒತ್ತಡ ಹೇರಲಾಗಿದೆಯೇ? | ಸದರಿ ವಿತ್ತೀಯ ಕೊರತೆಯನ್ನು ಸರಿಪಡಿಸುವುದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬಹುದಾದ ಸೂಕ್ತ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರವು ಯಾವುದೇ ಸ್ಪಷ್ಟ ಭರವಸೆಯನ್ನು ನೀಡಿರುವುದಿಲ್ಲ.<br>ಈ ಸಂಬಂಧ ರಾಜ್ಯಗಳ ಅಭಿಪ್ರಾಯವನ್ನು ಪರಿಗಣಿಸಬೇಕೆಂದು ಹಾಗೂ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಬಾರದೆಂದು ಹಕ್ಕೊತ್ತಾಯವನ್ನು 56ನೇ ಜಿಎಸ್‌ಟಿ ಪರಿಷತ್ತಿನ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ಮುಂದುವರೆದು, ಈ ಸಂಬಂಧ ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆಯಲಾಗಿರುತ್ತದೆ. |

**ಸಂಖ್ಯೆ:ಆಇ 73 ಸಿಎಸ್‌ಎಲ್ 2025**

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ